

ಹೀಗೇ ಚಲಿಸಿ, ಅರಸೀಕೆರೆಯನ್ನು ದಾಟಿ, ಅಲ್ಲಿ ಅನಾಮಿಕ ತಿರುವೊಂದರಾಚೆ ಹೆದ್ದಾರಿಯ ಪಕ್ಕ ಇರುವ 'ವಾಹ್ ಸವಿ' ಢಾಬಾದೆದುರು ತಾನಾಗೇ ಹೊರಳಿ ನಿಲ್ಲುತ್ತದೆ ಶಿವಶಕ್ತಿ. ಅದು ನಿಲ್ಲುತ್ತಿದ್ದಂತೆಯೇ ಧಿಗ್ಗನೆದ್ದು ಕೂರುವ ತಂಬಿ 'ಹತ್ನಿಮಿಷ ಟೈಮಿದೆ ನೋಡಿ... ಟೀ ಕಾಫಿ ಕುಡ್ಯೋರಿದ್ರೆ ಬನ್ನಿ' ಎಂದು, ಎಲ್ಲರಿಗೂ ತಾನೇ ಪಾರ್ಟಿ ಕೊಡಿಸುವವನಂತೆ ಇಳಿದು ಮುಂದೆ ಓಡುತ್ತಾನೆ. ಹಾಗೆ ಓಡುವ ಅವನು ಮೊದಲು ನುಗ್ಗುವುದು ರೀಸಸ್ ರೂಮಿಗೆ. ಉಕ್ಕಿ ಬರಲು ತಯಾರಿರುವ ಜಲಧಾರೆಯನ್ನು ಒಂದು ಕೈಯಿಂದ ಅಮುಕಿ ಹಿಡಿದು ತಡೆಯುತ್ತಾ ಮೂತ್ರಾಲಯಕ್ಕೆ ಓಡುವ ಅವನಿಗೆ ಹಿಂದಿಂದ 'ಅರ್ಜೆಂಟಲ್ಲಿ ಲೇಡೀಸ್ ಟಾಯ್ಲೆಟ್ಟಿಗೆ ಹೋಗಿಬಿಡ್ಬೇಡಲೇ ಸಾಲೇ' ಎಂದು ರೇಗಿಸುತ್ತಲೇ ತಾನು ರಸ್ತೆಯಾಚೆಗಿನ ಪೊದೆಗಳತ್ತ ನಡೆಯುತ್ತಾನೆ ಜಬ್ಬರ್. ಹೆದ್ದಾರಿಯಲ್ಲಿ ವಾಹನಗಳಂತೂ ಜಪಾನಿನ ಬುಲೆಟ್ ಟ್ರೈನುಗಳಂತೆ ಸರ್ ಸರ್ ಎಂದು ಸಾಗಿ ಮಾಯವಾಗುತ್ತಿರುತ್ತವೆ. ಬೆಳಕೊಂದು ಮಿಂಚಿ ಹೋದಂತೆ ಕಾಣುವ ಆ ದೃಶ್ಯವನ್ನು ಬರ್ಸಾತಿನ ಮಿಂಚಿನಷ್ಟೇ ಕುತೂಹಲದಿಂದ ನೋಡುತ್ತಾ 'ವಾಹ್ ಸವಿ'ಯನ್ನು ಪ್ರವೇಶಿಸಿದರೆ ಅದರ ಬಾಗಿಲಿನಲ್ಲೇ ಕುಳಿತಿರುವ ಮಾಲಿಕ ಉಮೇಶಿ 'ಚೆನ್... ನಾಗಿದೀರಾ?' ಎಂದು ಸಿನಿಮಾ